

ಈ ಕೆಲವು ಸಾಲುಗಳಿವೆ:

ಇಂದಿನ ಸಿನಿಮಾಗಳಂತೆ ಇಂದಿನ ಮದುವೆ;
ಬೆಳ್ಳಿಹಬ್ಬ ಬಂಗಾರದ ಹಬ್ಬ, ಇಲ್ಲ ಗೊಡವೆ;
ಇಪ್ಪತ್ತೈದನೇ ಪ್ರದರ್ಶನ, ಸಿಲ್ವರ್ ಜ್ಯುಬಿಲಿ
ಆದುವೇ.

ಹೀಗೆ ಇಂದಿನ ಬಹುಪಾಲು ಮದುವೆಗಳು ಅಲ್ಪಾಯುಷಿಗಳಾಗಿವೆ. ವಿವಾಹದಂತೆಯೇ, ವಿವಾಹ ವಿಚ್ಛೇದನವೂ ಇಂದು ಸರ್ವೇಸಾಧಾರಣ ಸಂಗತಿಯಾಗಿದೆ. ಈ ಬಗ್ಗೆ ನನ್ನದೊಂದು ಹನಿಗವಿತೆ ಹೀಗಿದೆ:

ಅದೃಷ್ಟವಂತ ನನ್ನ ಗೆಳೆಯ;
ಅವನಿಗೆ ಒಬ್ಬಳೇ ಮಗಳು;
ಆದರೆ ಪ್ರತಿ ದೀಪಾವಳಿಗೂ
ಒಬ್ಬ ಹೊಸ ಅಳಿಯ.

ಇದಕ್ಕಿಂತಲೂ ಆತಂಕಕಾರಿ ಸಂಗತಿಯೆಂದರೆ, ಇಂದು ‘ದಾಂಪತ್ಯ ಎಂಬ ಪದ ತನ್ನ ಶತ ಶತಮಾನಗಳ ಸಾಂಪ್ರದಾಯಿಕ ಅರ್ಥವನ್ನೇ ಕಳೆದುಕೊಳ್ಳುವ ಹಂತಕ್ಕೆ ಬಂದುಮುಟ್ಟಿದೆ. ಏಕೆಂದರೆ, ಗಂಡು ಗಂಡನ್ನೇ, ಹೆಣ್ಣು ಹೆಣ್ಣನ್ನೇ ಮದುವೆಯಾಗುತ್ತಿರುವ ಕಾಲದಲ್ಲಿ ನಾವಿದ್ದೇವೆ. ಇದರ ತಾರ್ಕಿಕ ಅಂತ್ಯವೋ ಎಂಬಂತೆ ಇತ್ತೀಚೆಗೆ ಒಬ್ಬಾಕೆ ತನ್ನನ್ನು ತಾನೇ ವರಿಸಿ, ‘ಸೆಲ್ಫಿ’ ಮದುವೆಯಾಗಿದ್ದಾಳೆ. ‘ಸ್ವಯಂವರ’ದ ಆತ್ಯಂತಿಕ ಅರ್ಥ ಬಹುಶಃ ಇದೇ ಇದ್ದೀತು.

“ಕಾಲಾಯ ತಸ್ಮೈ ನಮಃ” ●